ಅಧ್ಯಕ್ಷರು :— ಮಂಡಿಸಲಾಯಿತು. ಸೋಮವಾರ, ಮಂಗಳವಾರ, ಬುಧವಾರ ಪ್ರಶ್ನೋತ್ತರ ವೇಳೆ ಇರುವುದಿಲ್ಲ. ಆ ದಿನ ಇವತ್ತು ಉಳಿದಿರುವ ಎಲ್ಲಾ ಪ್ರಶ್ನೆಗಳನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ :— ಮಾನ್ಯ ಅಧ್ಯಕ್ಷರೆ, ನಾನು ಶೂನ್ಯವೇಳೆಯಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಈಗಾಗಲೇ ನೋಟೀಸ್ ಕೊಟ್ಟಿದ್ದೇನೆ.

ಅಧ್ಯಕ್ಷರು :— ಈಗ ಉತ್ತರ ಕೊಡಬೇಕಾಗಿರುವುದು ನಾಲ್ಕು ರೆಡಿ ಇದ್ದಾವೆ. ಅದರ ಜೊತೆಗೆ ನೀವು ಹೊಸದು ಹೇಳುತ್ತಾ ಇದ್ದೀರಾ? ಉತ್ತರ ಬಂದಿರುವುದು ಹತ್ತು ಇದ್ದಾವೆ. ಅವುಗಳನ್ನೆಲ್ಲಾ ಹಾಕಿಕೊಳ್ಳುವುದಕ್ಕೆ ಆಗುವುದಿಲ್ಲ. ಒಂದು ದಿವಸಕ್ಕೆ ನಾಲ್ಕು ಮಾತ್ರ ತೆಗೆದುಕೊಳ್ಳಬಹುದು. ಬೇಕಾದರೆ 20ನ್ನು ಸಹ ತೆಗೆದುಕೊಳ್ಳಬಹುದು. ಸೋಮವಾರ, ಮಂಗಳವಾರ, ಬುಧವಾರ ಸಭಾನಾಯಕರು ಮತ್ತು ವಿರೋಧಪಕ್ಷದವರ ಜೊತೆಯಲ್ಲಿ ಮಾತನಾಡಿ ಗುರುವಾರ ಸಭೆ ಸೇರಬಹುದು ಅದನ್ನು ಮಾಡೋಣ.

ಶ್ರೀ ಎ. ರಾಮದಾಸ್ :— ಮೈಸೂರಿನಲ್ಲಿ ಧರಣಿ ನಡೆಯುತ್ತಿದೆ ಅದಕ್ಕೋಸ್ಕರ ಹೇಳುತ್ತಿದ್ದೇನೆ.

ಅಧ್ಯಕ್ಷರು :— ದಿವಸಕ್ಕೆ ನಾಲ್ಕರಂತೆ ತೆಗೆದುಕೊಳ್ಳೋಣ. ಮುಂದಿನ ವಾರ ಪ್ರಶ್ನೋತ್ತರ ವೇಳೆ ಇಲ್ಲದಿರುವುದರಿಂದ ಎಲ್ಲವನ್ನೂ ತೆಗೆದುಕೊಳ್ಳುತ್ತೇನೆ. ಉತ್ತರಗಳು ಬಂದಿದೆ. ಎಲ್ಲಾ ಸದಸ್ಯರಿಗೆ ನಾನು ಹೇಳುವುದು ತಮಗೆ ಅರ್ಥವಾಗದಿದ್ದರೆ ನಾನು ಹೇಳಿ ಏನು ಪ್ರಯೋಜನ? ಎಲ್ಲಾ ಸದಸ್ಯರದ್ದು ಮುಖ್ಯವಾದುದು. ಮಾನ್ಯ ರಾಮದಾಸ್ ರವರೇ ತಾವು ಕುಳಿತುಕೊಳ್ಳಿ. ಮುಂದಿನ ವಾರ ತೆಗೆದುಕೊಳ್ಳೋಣ. ಮಾನ್ಯ ಬೈರೇಗೌಡರೆ. ತಾವು ಮಾತನಾಡಿ.

2. ಅಧ್ಯಕ್ಷರ ಅಪ್ಪಣೆ ಮೇರೆಗೆ.

(ಅ) ರಾಜ್ಯದಲ್ಲಿನ ರೇಷ್ಮೆ ಉತ್ಪಾದನೆ ಕುರಿತು.

+ಶ್ರೀ ಸಿ. ಬೈರೇಗೌಡ (ವೇಮಗಲ್) :— ಮಾನ್ಯ ಅಧ್ಯಕ್ಷರೆ, ಸರ್ಕಾರಿ ಆದೇಶದ ಸಂಖ್ಯೆ ಸಿ 12 ಎಸ್‌ಬಿಎಲ್‌ಕೆ ದಿನಾಂಕ: 9-2-90ರಿಂದ..

ಅಧ್ಯಕ್ಷರು :— ಮಾನ್ಯ ಬೈರೇಗೌಡರೆ, ಶೂನ್ಯವೇಳೆಯಲ್ಲಿ ವಿಷಯವನ್ನು ಲಂಭಿಸುವುದುಬೇಡ. ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಸಿ. ಬೈರೇಗೌಡ :— ಆಯಿತು ಸೂಕ್ಷ್ಮವಾಗಿ ಹೇಳುತ್ತೇನೆ. ಒಂದು ಪ್ರಶ್ನೆಗೆ ಮಾನ್ಯ ರೇಷ್ಮೆ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ರಾಜ್ಯದಲ್ಲಿ ರೇಷ್ಮೆ ಉತ್ಪಾದನೆ ಕಡಿಮೆಯಾಗಿದೆಯೆಂದು ಹೇಳಿದ್ದಾರೆ. ಧಾರಣೆ ಬಿದ್ದಿರತಕ್ಕದ್ದು, ರೇಷ್ಮೆ ಗೂಡಿನ ಬೆಲೆ ಬಿದ್ದಿರತಕ್ಕದ್ದು ಅದಕ್ಕೆ ಕಾರಣವೇನೆಂದರೆ, ರೇಷ್ಮೆ ನೂಲು ಬಿಚ್ಚುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಮಾರ್ಕೆಟ್‌ನಲ್ಲಿ ಸ್ಪರ್ಧೆಯಿಲ್ಲದೆ ರೇಷ್ಮೆ ಗೂಡಿನ ಬೆಲೆ ಬೀಳುತ್ತಿದೆ. ಹಿಂದೆ ಒಂದು ಸಾರಿ ಒಂದು ಕೆ.ಜಿ. ರೇಷ್ಮೆ ಗೂಡಿನ ಬೆಲೆ 250 ರೂಪಾಯಿಗಳ ವರೆಗೆ ಹೋಗಿತ್ತು. ಒಂದು ಕೆ.ಜಿ. ರೇಷ್ಮೆ ಬೆಲೆ ಸುಮಾರು ಮೂರು ಸಾವಿರ ರೂಪಾಯಿಗಳ ವರೆಗೆ ಹೋಗಿತ್ತು. ಚೈನಾದೇಶದಿಂದ ರೇಷ್ಮೆಯನ್ನು ತರಿಸಿದ ಕಾರಣದಿಂದ ದಿಢೀರ್ ರೇಷ್ಮೆ ಬೆಲೆ ಕುಸಿತವಾಯಿತು. ರೇಷ್ಮೆಗೆ ರೋಗರುಜಿನಗಳು ಜಾಸ್ತಿಯಾಯಿತು. ರೇಷ್ಮೆ ಬೆಳೆಯತಕ್ಕವರು ನಮ್ಮ ರಾಜ್ಯದಲ್ಲಿ ಜಾಸ್ತಿ ಜನರು ಇದ್ದಾರೆ. ರೇಷ್ಮೆ ನೂಲು ಬಿಚ್ಚುವವರು ಅವರು ಮಾಡಿರತಕ್ಕ ಸಾಲದ ಮೇಲೆ ಅಪಾರವಾದ ಬಡ್ಡಿ ಮತ್ತು ಸುಸ್ತಿ ಬಡ್ಡಿ ಹೆಚ್ಚಾಗಿ ಇವತ್ತು ರಾಜ್ಯದಲ್ಲಿ ರೇಷ್ಮೆ ನೂಲು ಬಿಚ್ಚುವವರ ಸಂಖ್ಯೆ ಕಡಿಮೆಯಾಗಿದೆ. ಕೋಟ್ಯಾಂತರ ರೂಪಾಯಿ ಬೆಳೆ ಕೂಡ ಕಡಿಮೆಯಾಗಿದೆ. ರೈತರಿಗೆ ಆಗಿರತಕ್ಕ ಸಮಸ್ಯೆ ಇದು. ನಮ್ಮ ರಾಜ್ಯದ ಐದಾರು ಜಿಲ್ಲೆಗಳಲ್ಲಿ ಇದು ಮುಖ್ಯವಾಗಿರತಕ್ಕ ಆದಾಯ. ಅವರಿಗೆ ತೊಂದರೆಯಾಗುತ್ತಿದೆ, ನಮ್ಮ ಸರ್ಕಾರ ಇದ್ದಂತಹ ಕಾಲದಲ್ಲಿ ನೂರು ಬಿಚ್ಚುವವರು ಮಾಡಿದ ಸಾಲದ ಮೇಲೆ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ವಜಾ ಮಾಡಿದ್ದೇವೆ. ಮಾರ್ಚ್ 31ನೇ 2000ದವರೆಗೆ ಸಾಲ ಕೊಡುವುದಕ್ಕೆ ಅವಕಾಶ ಕೊಟ್ಟಿದ್ದೇವೆ. ನಿಮ್ಮ ಸರ್ಕಾರ ಬಂದಮೇಲೆ ಆ ಅವಕಾಶವನ್ನು ವಿಸ್ತರಣೆ ಮಾಡಿದ್ದೀರಿ. ಆದರೆ ದುರಾದೃಷ್ಟವಶಾತ್ ಏಕೋ ಏನೋ ಗೊತ್ತಿಲ್ಲ ದಿನಾಂಕ 21-10-2000 30-10-2000ದವರೆಗೆ ವಿಸ್ತರಣೆ ಮಾಡಿದ್ದೀರಿ. ಅದು ಸಾಲ ಕಟ್ಟುವುದಕ್ಕೆ ಕೊನೆಯ ತಾರೀಖು. ಹತ್ತು ದಿವಸಗಳ ಅವಧಿ ಕೊಟ್ಟಿದ್ದೀರಿ. ತಾವು ಮಾಡಿರತಕ್ಕ ಆಜ್ಞೆ ಏನಾಗಿದೆ ಅಂದರೆ ಸಂಬಂಧಪಟ್ಟ ಬ್ಯಾಂಕುಗಳಿಗೆ ತಲುಪದೆ, ಯಾರಿಗೂ ತಿಳಿಸುವುದಕ್ಕೆ ಆಗಿಲ್ಲ. ನೀವು ಏನು ಆಜ್ಞೆಯನ್ನು ವಿಸ್ತರಣೆ ಮಾಡಿದ್ದೀರಿ ಅದು ರೀಲಸ್ಟ್‌ಗಳಿಗೆ ತಲುಪದೆ ನಿರರ್ಥಕವಾಗಿದೆ. ಆದರಿಂದ ಯಾರೂ ಪ್ರಯೋಜನ ಪಡೆದುಕೊಳ್ಳುವುದಕ್ಕೆ ಆಗಿಲ್ಲ. ಆದ್ದರಿಂದ 2001ನೇ ಮಾರ್ಚಿಯವರೆಗೆ ತಾವೇನು ಅವಕಾಶವನ್ನು ಕೊಟ್ಟಿದ್ದೀರಿ ಅದನ್ನು ವಿಸ್ತರಣೆ ಮಾಡಬೇಕೆಂದು ಮನವಿ ಇದೆ. ರಾಜ್ಯದಲ್ಲಿ 35 ಲಕ್ಷ ಜನ ಈ ಉದ್ಯಮದಲ್ಲಿ ತೊಡಗಿದ್ದಾರೆ. ಒಂದು ಕಡೆ ರೀಲರ್ಸ್ ಒಂದು ಕಡೆ ರೇಷ್ಮೆ ಬೆಳೆಗಾರರು ಇಬ್ಬರೂ ಸಬಲರಾಗಿದ್ದರೆ, ಈ ಉದ್ಯಮ ಉಳಿಯಬೇಕಾದರೆ ಮಾರ್ಚ್ 31,2001ರವರೆಗೆ ಅವಧಿಯನ್ನು ವಿಸ್ತರಿಸಿ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಯಾರ್ಯಾರು ಅಸಲು ಕಟ್ಟುತ್ತಾರೆ ಅವರಿಗೆ ಬಡ್ಡಿ, ಸುಸ್ತಿ ಬಡ್ಡಿಯನ್ನು ವಜಾ ಮಾಡತಕ್ಕ ಅವಕಾಶವನ್ನು ಒದಗಿಸಿಕೊಡಬೇಕೆಂದು ಮತ್ತೊಮ್ಮೆ ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

+ಶ್ರೀ ಎಂ. ಮಹದೇವ್ (ರೇಷ್ಮೆ, ಜವಳಿ ಸಚಿವರು) :— ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ರೇಷ್ಮೆ ನೂಲು ಬಿಚ್ಚಣಿಕೆದಾರರು ಸಹಕಾರ ಮತ್ತು ವಾಣಿಜ್ಯ ಬ್ಯಾಂಕುಗಳು ಹಾಗೂ ಕರ್ನಾಟಕ ರಾಜ್ಯ ಹಣಕಾಸು ನಿಗಮಗಳಿಂದ ಪಡೆದಿರುವ ಸರಳ ಬಡ್ಡಿ ಸಾಲ ಶೇಕಡ ನೂರಕ್ಕೆ ನೂರರಷ್ಟು ದಿನಾಂಕ: 31-3-2000ದ ಒಳಗೆ ಹಣವನ್ನು ವಾಪಸ್ಸು ನೀಡಿದರೆ ಆ ಪ್ರಕರಣಗಳಿಗೆ ಅನ್ವಯಿಸುವಂತೆ ಸರ್ಕಾರ ಆದೇಶದ ಸಂಖ್ಯೆ: ಸಿ12 ಎಸ್‌ಐಎಲ್‌ಕೆ ಪ್ರಕಾರ ಬೆಲೆ ಸ್ಥಿರೀಕರಣನಿಧಿ ಪ್ರಾಧಿಕಾರದಿಂದ ಹಿಂಬರಿಸಲು ಅನುಮತಿಯನ್ನು ಪಡೆಯಲಾಗಿತ್ತು. ತಾವು ಹೇಳಿದಹಾಗೆ ಈ ಆದೇಶದಲ್ಲಿ ಈ ಸೌಲಭ್ಯವನ್ನು ದಿನಾಂಕ: 31-10-2000ದವರೆಗೆ ವಿಸ್ತರಿಸಲಾಗಿತ್ತು. ಈ ಆದೇಶ ಸಂಬಂಧಪಟ್ಟ ಬ್ಯಾಂಕುಗಳು ಇತರೆ ಸಂಸ್ಥೆಗಳಿಗೆ ತಲುಪದಿರುವ ಕಾರಣ ಆದೇಶವನ್ನು ದಿನಾಂಕ: 31-3-2001ರವರೆಗೆ ವಿಸ್ತರಿಸಬೇಕೆಂದು ನೂಲು ಬಿಚ್ಚಣಿಕೆದಾರರ ಸಂಘಗಳು ಸರ್ಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ. ಮನವಿಯನ್ನು ಪರಿಶೀಲಿಸಿ ಸದರಿ ಯೋಜನೆಯ ಅವಧಿಯನ್ನು ದಿನಾಂಕ: 31-3-2001 ರವರೆಗೆ ಅಂತಿಮವಾಗಿ ವಿಸ್ತರಿಸಲು ಸಚಿವಸಂಪುಟದ ಅನುಮೋದನೆಯನ್ನು ಪಡೆಯಲು ಕ್ರಮ ಕೈಗೊಳ್ಳಲಾಗಿದೆ. ಬಡ್ಡಿ ಮೊತ್ತ ಒಟ್ಟು ಏಳೂವರೆ ಕೋಟಿ ರೂಪಾಯಿಯಾಗುತ್ತದೆ.

12.40 ಪಿ.ಎಂ.

ಸುಸ್ತಿ ಬಡ್ಡಿ ಮೊತ್ತ 50 ಲಕ್ಷ ರೂಪಾಯಿಗಳು ಆಗುತ್ತದೆ. ಅಸಲು 12 ಕೋಟಿ ರೂಪಾಯಿಗಳು ಇದೆ. ಏಳೂವರೆ ಕೋಟಿ ರೂಪಾಯಿಗಳು ಬಡ್ಡಿ ಮತ್ತು ಸುಸ್ತಿಬಡ್ಡಿ ಇದೆ. ಇದನ್ನು ಸರ್ಕಾರ ಪರಿಶೀಲನೆ ಮಾಡಿ ಮುಂದಿನ ಸಚಿವ ಸಂಪುಟಸಭೆ ಮುಂದೆ ತಂದು ಇದನ್ನು ವಿಸ್ತರಿಸಲಿಕ್ಕೆ ನಾವು ಕ್ರಮವನ್ನು ಕೈಗೊಳ್ಳುತ್ತೇವೆ.

(ಅ) ಕೆ.ಜಿ.ಎಫ್. ಕ್ಷೇತ್ರದಲ್ಲಿನ ರಾಬರ್ಟ್‌ಸನ್‌ಪೇಟೆ ಮುನಿಸಿಪಾಲಿಟಿ ಕುರಿತು.

ಶ್ರೀ ಎಂ. ಭಕ್ತವತ್ಸಲಂ (ಕೆ.ಜಿ.ಎಫ್) :— ಮಾನ್ಯ ಅಧ್ಯಕ್ಷರೇ, ನಮ್ಮ ಕೋಲಾರ ಜಿಲ್ಲೆಯಲ್ಲಿ ಹನ್ನೊಂದು ಎಂ.ಎಲ್.ಎ. ಕ್ಷೇತ್ರಗಳು ಇವೆ. ಅದರಲ್ಲಿ ನನ್ನ ಕೆ.ಜಿ.ಎಫ್. ಕ್ಷೇತ್ರದಲ್ಲಿ ರಾಬರ್ಟ್‌ಸನ್‌ಪೇಟೆ ಮುನಿಸಿಪಾಲಿಟಿಯಲ್ಲಿ ಇವತ್ತಿನ ದಿವಸ ಬಹಳ ಅನ್ಯಾಯ, ಅಕ್ರಮ ಎಲ್ಲ ಆಗಿದೆ. ಮಿಸ್-ಮ್ಯಾನೇಜ್‌ಮೆಂಟ್, ಮಿಸ್‌ಯೂಸ್ ಆಫ್ ಫಂಡ್ ಏನಾಗಿದೆ, ಅದರ ಬಗ್ಗೆ ಇವತ್ತಿನದಿವಸ ನಾನು ಇಲ್ಲಿ ಸಭೆಯಲ್ಲಿ ಮಾತನಾಡುವುದಕ್ಕೆ ತಾವು ಅವಕಾಶ ಕೊಟ್ಟಿದ್ದೀರಿ. ನನ್ನ ಕ್ಷೇತ್ರದಲ್ಲಿ ಪೂರ್ತಿಯಾಗಿ ಅರ್ಬನ್ ಏರಿಯಾ ಬರುತ್ತದೆ. ನಾವು ಶಾಸಕರಾಗಿ ಜನರಿಗೆ ಕೆಲಸ ಮಾಡಬೇಕು ಎಂದರೆ ಈಗ ಕೆ.ಜಿ.ಎಫ್. ಮುನಿಸಿಪಾಲಿಟಿಯಿಂದ ನಾವು ಮಾಡಬೇಕು. ಒಂದು ಸಣ್ಣ ಕೆಲಸವನ್ನು, ಒಂದು ಸಿಂಗಲ್ ಸ್ವೀಟ್ ಲೈಟ್ ಹಾಕಬೇಕಾದರೂ ಮುನಿಸಿಪಾಲಿಟಿಯನ್ನು ಕೇಳಬೇಕು, ಮತ್ತು